ಎಲ್ಲದಕ್ಕೂ ಸಾಕ್ಷಿ ಇರ್ತಾರೆ. ಕಂಡದ್ದನ್ನು ಕಂಡ ಹಾಗೆ ಹೇಳೋ ಪ್ರಾಮಾಣಿಕರು ಒಬ್ಬರಾದರೂ ಇರ್ತಾರೆ. ಕಲ್ಪನಾಶಕ್ತಿ ಒಣಗಿಹೋಗ್ತಾ ಇದೆ, ಬಡವರನ್ನು ದೇವರೇ ಕಾಪಾಡ್ಬೇಕು.)

ನಂಗೆ ಅವನನ್ನ ಮುಟ್ಟೋಕೆ ಸಾಧ್ಯ ಆಯ್ತು ಅಂತ ಕಾಣತ್ತೆ– ನೀರುಮನುಷ್ಯನ್ನ– ಸಾಕ್ಷಿಗಳು ಹಾಗೆಯೇ ಹೇಳ್ತಿದಾರೆ. ಆದರೆ ಸಿಡಿಮದ್ದಿನ ಫ್ಯೂಸಿಗೆ ಬೆಂಕಿ ಕೊಟ್ಟಿದ್ದು ನಾನಲ್ಲ. ಬೇಕಾದ್ರೆ ಪ್ರಮಾಣ ಮಾಡ್ತೀನಿ. ಅದು ನಾನಲ್ಲ. ನಂಗೆ ಆಸ್ಫೋಟನೆ ಮಾಡೋ ಆಲೋಚನೆ ಕೂಡ ಬಂದಿರಲಿಲ್ಲ.

ನೀರು ಹಂಚುವ ಮನುಷ್ಯ. ನೋಡೋದಕ್ಕೆ ಬಹಳ ಮರ್ಯಾದಸ್ಥ. ನಮ್ಮ ಊರಿನಲ್ಲಿ ವಾಸ ಮಾಡೋಕೆ ಬಹಳ ಅರ್ಹನಾದೋನು. ಬೀಳುವ ಎಲೆಗಳನ್ನು, ಹಸಿದ ನಾಯಿಗಳನ್ನು, ಈಗಾಗಲೇ ಸಾಯುವ ಹಾದಿ ಹಿಡಿದದ್ದನ್ನು ಮತ್ತು ತಾಳ್ಮೆಯಿಂದ ತನ್ನ ಅಂತ್ಯಕ್ಕಾಗಿ ಕಾದಿರುವವರನ್ನು ಇವನು ಬಹಳ ಗೌರವದಿಂದ ನೋಡುತ್ತಾನೆ: ಮನುಷ್ಯ.

(ಈ ಊರಿನ ಸ್ಮಶಾನದಲ್ಲಿ ಸಮಾಧಿಗಳಿಗೂ ಬಗೆಬಗೆಯ ಬಣ್ಣಗಳು. ಇಲ್ಲಿನ ಸುತ್ತಮುತ್ತಲ ಮನೆಗಳು ಹಸಿ ಇಟ್ಟಿಗೆಯವು. ಈ ಭೂಮಿಯಲ್ಲಿ ಬದುಕಿರೋವಾಗ ನಾವು ಇದರ ಜೊತೆಗೆ ಬೆರೆತು ಬಾಳಬೇಕು.)

ಆದರೆ ಇಲ್ಲಿ ನೋಡಿದ್ರೆ, ಇಡೀ ಹಳ್ಳಿಯಲ್ಲಿ ಮೈಮೇಲೆ ಒಂದೇ ಒಂದು ದೂಳಿನ ಕಣವೂ ಇಲ್ಲದ ಮನುಷ್ಯ ಅಂದ್ರೆ ಆ ನೀರು ಹಂಚುವವನು – ನಮಗೆಲ್ಲಾ ಅವಮಾನ ಅನ್ನೋ ಹಾಗಿದಾನೆ.

ಕಲ್ಲು, ದೂಳು ಮತ್ತೆ ಕಲ್ಲು... ಊರಿನ ಎಲ್ಲ ದಾರಿಗಳೂ ಚಲಿಸುವುದು ಇಷ್ಟಗಲ ಬೆಳಕು ಚೆಲ್ಲಿಕೊಂಡ ಮಾರ್ಕೆಟ್ಟಿನ ಕಡೆಗೆ. ಅಲ್ಲಿ ಮೇಲ್ಗಡೆ, ನೀಲಿ ಬಣ್ಣದ ನೀರು ಹಂಚುವ ಮನುಷ್ಯ ಫಳಫಳ ಹೊಳೆಯುತ್ತಾ ಕುಳಿತಿರುತ್ತಾನೆ. ಚೂರೂ ಕೊಳಕಾಗದ ಬಿಳೀ ಅಂಗಿ ತೊಟ್ಟು, ಬಂಗಾರದ ಹಲ್ಲಿನ, ಕಪ್ಪು ಮೀಸೆಯವನು. ಕೆಳಗೆ, ನಾವು ಈಗಾಗಲೇ ಒಣಗುತ್ತಿರುವ ನದಿಯಿಂದ ಬಕೆಟ್ಟುಗಳಲ್ಲಿ ನೀರು ತುಂಬಿಕೊಂಡು ನಡೆಯುತ್ತೇವೆ.

ಆ ಘಟನೆ ನಡೆದದ್ದು ಭಾನುವಾರ, ಆಗಲೇ ಒಂದು ವಾರ ಕಳೆಯಿತು.

ಸಿಡಿಮದ್ದಿನ ಫ್ಯೂಸಿಗೆ ಬೆಂಕಿ ಹಚ್ಚಿದ್ದು ನಾನಲ್ಲ. ನನಗೂ ಆ ಆಸ್ಫೋಟನೆಗೂ ಯಾವ ಸಂಬಂಧವೂ ಇಲ್ಲ.

ಅವನು ಹಳೆಯ ಕಾನ್ವೆಂಟಿನ ಅಂಗಳದಲ್ಲಿ ಕೂತಿದ್ದ. ನೆತ್ತಿಯಿಂದ ಕಾಲುಬೆರಳುಗಳವರೆಗೆ ಶುಭ್ರವಾಗಿದ್ದ. ನಾನು ಎಂದಿನಂತೆ ಕೊಳಕಾಗಿದ್ದೆ, ಮೈಯನ್ನು ದೂಳು ಮೆತ್ತಿತ್ತು. ನನ್ನ ಕೈಬೆರಳುಗಳ ತುದಿಗೆ ಅಂಟಿದ್ದ ನೀಲಿ ಬಣ್ಣ ಇನ್ನೂ ಕುಂದಿರಲಿಲ್ಲ. (ಎಲ್ಲರ ಮನೆಯ ಹಾಗೆ ನಮ್ಮನೆಯದ್ದು ಕೂಡ ಮಣ್ಣಿನ ಬಣ್ಣ. ಸ್ವಲ್ಪ ರಂಗು ಬರಲಿ ಅಂತ ಗೋಡೆಗಳಿಗೆ ನೀಲಿಬಣ್ಣ ಹಚ್ತಾ ಇದ್ದೆ: ಅವು ಸ್ವಲ್ಪವಾದ್ರೂ ನೀರಿನ ಹಾಗೆ ಕಾಣಲಿ ಅಂತ ನೀಲಿ ಬಣ್ಣದ ಪಸೆಯಿರಲಿ ಅಂತ ನಂಗೆ ಆಸೆ.) (ಇಷ್ಟಕ್ಕೂ, ಯಾವ ಸಾಕ್ಷಿಯಾದರೂ ನಾನು ಅವನನ್ನ ಮುಟ್ಟಿದೆ ಅಂತ ಹೇಳಿದ್ರೆ... ಸರಿ, ಮುಟ್ಟಿರಬಹುದು. ಅವನ ಕೈಗಳು ನನ್ನ ಮೈಮೇಲೆ ಇದ್ದವೇ ಹೊರತು ನನ್ನ ಕೈ ಅವನ ಮೈಮೇಲೆ ಇತ್ತು ಅನ್ನೋದನ್ನ ಒಪ್ಪೋಕೆ ಸಾಧ್ಯವೇ ಇಲ್ಲ.)

ಅವತ್ತು ಪಾಮ್ ಭಾನುವಾರ[1], ಇನ್ನೂ ನಿಖರವಾಗಿ ಹೇಳಬೇಕು ಅಂದ್ರೆ, ಅವನು ಅಂಗಳದಲ್ಲಿ ಕೂತುಕೊಂಡು ಲಾಭ ಎಷ್ಟು ಅಂತ ಲೆಕ್ಕಾ ಹಾಕ್ತಾ ಇದ್ದ. ಅವನೊಬ್ಬ ದುಷ್ಟ ನೀರುಮನುಷ್ಯ ಅನ್ನೋದರಲ್ಲಿ ಅನುಮಾನವೇ ಇಲ್ಲ: ನೂರು ಪೆಸೋ ದುಡ್ಡು ಬರೋದಾದ್ರೆ, ಶ್ರೀಮಂತರ ಮನೆಯ ನೀರಿನ ತೊಟ್ಟಿಗಳು ತುಂಬಿ ಹರಿದು ಹೋಗೋವಷ್ಟು ನೀರು ಬಿಡ್ತಿದ್ದ. ಅವರ ನೆರೆಹೊರೆಯ ಬಡವರು ಸಿಡಿಲು ಬಡಿದು ಸತ್ತರೂ ಅವನು ಕ್ಯಾರೇ ಅನ್ನುತ್ತಿರಲಿಲ್ಲ. ಅವನು ನೀರಿನ ಪೈಪುಗಳ ಜೇಡರಬಲೆಯ ಮಧ್ಯೆ ಕೂತ ಜೇಡನ ಹಾಗಿದ್ದ, ನೆಲದಡಿಯ ಚರಂಡಿ ಕೊಳವೆಗಳ ಸಾಮ್ರಾಜ್ಯದ ದೇವರಾಗಿದ್ದ.

1. **ಪಾಮ್ ಭಾನುವಾರ:** ಬೈಬಲ್‌ನ ಹೊಸ ಒಡಂಬಡಿಕೆಯಲ್ಲಿ ಇದರ ಉಲ್ಲೇಖವಿದೆ. ಯೇಸು ಕ್ರಿಸ್ತನು ಜೆರುಸಲೇಮನ್ನು ಪ್ರವೇಶಿಸುವ ಸಂದರ್ಭದಲ್ಲಿ ಅಲ್ಲಿನ ಜನರು ತಾಳೆಯ ಗರಿಯನ್ನು ಕೈಯಲ್ಲಿ ಹಿಡಿದು ಆಡಿಸುತ್ತ ಕ್ರಿಸ್ತನನ್ನು ಎದುರುಗೊಂಡರು. ಕ್ರೈಸ್ತರಿಗೆ ಇದು ಕ್ರಿಸ್ತನನ್ನು ತಮ್ಮ ಹೃದಯದೊಳಕ್ಕೆ ಬರಮಾಡಿಕೊಳ್ಳುವ ಮತ್ತು ಅವನನ್ನು ಅನುಸರಿಸುವುದರ ದ್ಯೋತಕವಾಗಿದೆ.